ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ
ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ
ದಿನಾಂಕ : DATE : 10/12/19

15

ಸಿದ್ದು ಋಣ ತೀರಿಸಲು ಮುಂದಾದ ಕುಚುಕು ತಂದಿಟ್ಟ ಪೇಚಾಟ | ಬಂಡವಾಳ ಬಯಲು ಮಾಡುವರೇ ಸುಧಾಕರ್?

# ರಮೇಶ್ ಕುಮಾರ್ ಅತ್ಯುತ್ಸಾಹ: ಕಾಂಗ್ರೆಸ್‌ಗೆ ತಂದ ನಿರುತ್ಸಾಹ

**ವಿಶ್ವವಾಣಿ ಸುದ್ದಿಮನೆ** ಕೋಲಾರ 10.12.19.

ಸಮ್ಮಿಶ್ರ ಸರಕಾರದಲ್ಲಿ ರಾಜೀನಾಮೆ ಕೊಟ್ಟ ಶಾಸಕರನ್ನು ಅನರ್ಹ ಮಾಡಿದ್ದ ಅಂದಿನ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್ ತಮ್ಮ ಅತ್ಯುತ್ಸಾಹದಿಂದಾಗಿ ಉಪಚುನಾವಣೆಯಲ್ಲಿ ಇಡೀ ಕಾಂಗ್ರೆಸ್ ಪಕ್ಷವನ್ನೇ ನಿರುತ್ಸಾಹಕ್ಕೆ ತಳ್ಳಿದ್ದಾರೆ.

ಹಿಂದಿನ ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿ ಸ್ಥಾನದ ಆಕಾಂಕ್ಷಿ ಆಗಿದ್ದ ಕೆ.ಆರ್.ರಮೇಶ್ ಕುಮಾರ್ ಬೇಳೆ ಬೇಯದೇ ಹೋದಾಗ ವಿಧಾನಸಭೆಯಲ್ಲಿ ಪ್ರತಿಪಕ್ಷವಾಗಿದ್ದ ಬಿಜೆಪಿಯೇ ನಾಚುವಂತೆ ಕಾಂಗ್ರೆಸ್ ಸರಕಾರವನ್ನು ಟೀಕಿಸುವ ಮೂಲಕ ಪ್ರತಿಪಕ್ಷದ ನಾಯಕನ ಚಾರ್ಜ್ ತೆಗೆದುಕೊಂಡಿದ್ದರು. ಒಂದೂವರೆ ವರ್ಷ ಅಧಿಕಾರ ಇದ್ದಾಗ ಅಂತಿಮವಾಗಿ ಸ್ನೇಹಿತನಿಗೆ ಮಣೆ ಹಾಕಿದ ಅಂದಿನ ಸಿಎಂ ಸಿದ್ದರಾಮಯ್ಯ ರಮೇಶ್ ಕುಮಾರ್ ಅವರಿಗೆ ಆರೋಗ್ಯ ಖಾತೆಯನ್ನೂ ದಯಪಾಲಿಸಿದ್ದರು. ಈ ಋಣದಲ್ಲಿದ್ದ ರಮೇಶ್ ಕುಮಾರ್, ಸಿದ್ದರಾಮಯ್ಯ ನೆರವಿಗೆ ಬಾರಲು ತವಕಿಸುತ್ತಿದ್ದರು. ಸಮ್ಮಿಶ್ರ ಸರಕಾರದಲ್ಲಿಯೂ ಸಹ ಸ್ಪೀಕರ್ ಹುದ್ದೆಗೆ ರಮೇಶ್ ಕುಮಾರ್ ಹೆಸರನ್ನು ಸೂಚಿಸಿದ್ದೇ ಮಾಡಿದ್ದೇ ಸಿದ್ದರಾಮಯ್ಯ. ಹೀಗಾಗಿ ಸ್ಪೀಕರ್ ಆಗುತ್ತಿದ್ದಂತೆಯೇ ರಮೇಶ್ ಕುಮಾರ್ ಅವರು ಸಿದ್ದರಾಮಯ್ಯ ಕೈಗೊಂಬೆ ಆಗುವ ಮೂಲಕ ಗೆಳೆಯನು ಹೇಳಿದಂತೆ ಕೇಳುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಸಮ್ಮಿಶ್ರ ಸರಕಾರ ಉರುಳುವ ಸ್ಥಿತಿಗೆ ಬಂದಾಗ ತಮ್ಮ ಹುದ್ದೆಯೂ ಹೋಗುತ್ತದೆ ಎಂಬುದನ್ನು ಮನಗಂಡ ಅಂದಿನ ಸ್ಪೀಕರ್ ರಮೇಶ್ ಕುಮಾರ್ ಅವರು ಸಿದ್ದರಾಮಯ್ಯ ಅವರ ಮೂರಿನನ್ವಯ 15 ಶಾಸಕರನ್ನು ಅನರ್ಹ ಮಾಡುವ ಉತ್ಸಾಹ ತೋರಿಸಿದ್ದರು.

**ಸಿದ್ದುಗೂ ಇದೇ ಬೇಕಿತ್ತು:** ಸಮ್ಮಿಶ್ರ ಸರಕಾರ ಉರುಳಿದ ತಕ್ಷಣ ಅದರ ಅಪಖ್ಯಾತಿ ತಮಗೇ ಸಲ್ಲುತ್ತದೆ ಎಂಬುದು ಸಿದ್ದರಾಮಯ್ಯ ಅವರಿಗೆ ಗೊತ್ತಿತ್ತು. ರಾಜೀನಾಮೆ ಕೊಟ್ಟವರೆಲ್ಲರೂ ಸಿದ್ದು ಆಪ್ತರೇ ಆಗಿದ್ದರಿಂದಾಗಿ ಡ್ಯಾಮೇಜ್ ಕಂಟ್ರೋಲ್ ಮಾಡಲೇಬೇಕಿದ್ದ ಅನಿವಾರ್ಯದಿಂದಾಗಿ ಸಿದ್ದರಾಮಯ್ಯ ಅವರ ಮೂರಿನ ಅನ್ವಯ ರಮೇಶ್ ಕುಮಾರ್ ಎಲ್ಲರನ್ನೂ ಅನರ್ಹ ಮಾಡುವ ಜತೆಗೆ ಜಿದ್ದಿಗೆ ಬಿದ್ದರು. ಚಿಕ್ಕಬಳ್ಳಾಪುರದಲ್ಲಿ ಡಾ. ಸುಧಾಕರ್ ಸೋಲಲೇ ಬೇಕೆಂದು ಪ್ರಚಾರದಲ್ಲೂ ಭಾಗ ವಹಿಸಿದ್ದ ರಮೇಶ್ ಕುಮಾರ್ ಅವರು ತೆಲುಗಿನಲ್ಲಿ ಭಾಷಣ ಮಾಡುವ ಮೂಲಕ ಮತದಾರರನ್ನು ಕಾಂಗ್ರೆಸ್‌ನತ್ತ ಆಕರ್ಷಿಸಲು ದಾಳ ಹೂಡಿದರಾದರೂ ಪ್ರಯೋಜನ ಆಗಲಿಲ್ಲ.

**ರಮೇಶ್ ಕುಮಾರ್ ಬಂಡವಾಳ ಬಯಲು ಮಾಡುವೆ:** ಚುನಾವಣೆ ನಂತರ ರಮೇಶ್ ಕುಮಾರ್ ಬಂಡವಾಳ ಬಯಲು ಮಾಡುತ್ತೇನೆ ಎಂದು ಗುಡುಗಿರುವ ಶಾಸಕ ಸುಧಾಕರ್ ಇದೀಗ ಚುನಾವಣೆಯಲ್ಲಿ ಭರ್ಜರಿ ಜಯ ಸಾಧಿಸಿದ್ದು ಬಹುತೇಕ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರೂ ಆಗುತ್ತಿದ್ದಾರೆ. ಹೀಗಾಗಿ ಇನ್ನು ಮುಂದೆ ರಮೇಶ್ ಕುಮಾರ್ ಹಣಿಯಲು ಸುಧಾಕರ್ ನಿಲುವುದು ಬಹುತೇಕ ಖಚಿತ ಆಗಿದ್ದು ರಾಜಕೀಯ ಜಿದ್ದಾಜಿದ್ದಿಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಸಾಕ್ಷಿಯಾಗಲಿವೆ.

## ನಾನು ಸರ್ವಾಧಿಕಾರಿ ಅಲ್ಲ



ಉಪ ಚುನಾವಣೆಯಲ್ಲಿನ ಜನರ ತೀರ್ಪನ್ನು ಗೌರವಿಸಲಾಗುತ್ತದೆ ಎಂದು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಪ್ರತಿಕ್ರಿಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಂವಿಧಾನವನ್ನು ಅನರ್ಹಗೊಳಿಸಿರುವ ತೀರ್ಪು ಎಂಬುದು ಹೆಬ್ಬಾರ್ ಅವರ ಅಭಿಪ್ರಾಯ ಇರಬಹುದು. ನಾನು ವೈಯಕ್ತಿಕವಾಗಿ ಯಾರನ್ನೂ ಅನರ್ಹಗೊಳಿಸಿಲ್ಲ ಎಂದು ಸಮರ್ಥನೆ ಮಾಡಿಕೊಂಡರು. ಸಂವಿಧಾನ ಬದ್ಧವಾಗಿ ತೀರ್ಪು ನೀಡಲಾಗಿದ್ದು, ನಾನು ಸರ್ವಾಧಿಕಾರಿ ಅಲ್ಲ ಎಂದು ಸ್ಪಷ್ಟಪಡಿಸಿದರು. ಉಪಚುನಾವಣೆ ಫಲಿತಾಂಶವನ್ನು ಕಾಂಗ್ರೆಸ್ ಧೈರ್ಯದಿಂದ ಮತ್ತು ಸಮಚಿತ್ತದಿಂದ ಸ್ವೀಕರಿಸಿದ್ದು, ರಾಜಕಾರಣ ಹಾಗೂ ಚುನಾವಣೆಯಲ್ಲಿ ಎಲ್ಲರೂ ಗೆಲ್ಲಲು ಹೋರಾಡುತ್ತಾರೆ. ಸೋಲನ್ನೂ ಸ್ವೀಕರಿಸುವ ಧೈರ್ಯ ಇದ್ದವರೇ ರಾಜಕಾರಣಿ ಆಗುತ್ತಾರೆ. ಈ ಚುನಾವಣೆಯಲ್ಲಿ ನಾನು ಹಣ ಕೊಟ್ಟವನೂ ಅಲ್ಲ, ತೆಗೆದುಕೊಂಡವನೂ ಅಲ್ಲವಾದ್ದರಿಂದಾಗಿ ಚುನಾವಣೆ ದುಡ್ಡಿನ ಮೇಲೆ ನಡೆದಿದಿಯೇ ಇಲ್ಲವೇ ಎಂಬುದು ನನಗೆ ಗೊತ್ತಿಲ್ಲ ಎಂದರು.